ಸಂದರ್ಭಗಳಲ್ಲಿ ಫೋನ್ ಅನ್ನು ಟ್ರ್ಯಾಕಿಂಗ್‌ನಲ್ಲಿ ಇಟ್ಟಿರುತ್ತಾರೆ ಎಂಬುದು ಒಬ್ಬ ಮೂರ್ಖನಿಗೂ ತಿಳಿಯುತ್ತದೆ. ಹಾಗಾಗಿ ತಾನಾಗಿಯೇ ಬಲೆಗೆ ಬಿದ್ದ.''

ಜಗದೀಶಚಂದ್ರ ಮತ್ತೆ ಮೌನಕ್ಕೆ ಶರಣಾದರು... ಶಿವಣ್ಣ ಏನೇನು ಹೇಳುತ್ತಾನೋ ಹೇಳಲಿ ಎಂಬ ಅಹಂಭಾವ ಇತ್ತು ಅವರ ಮುಖದಲ್ಲಿ.

"ಡ್ರೈವರ್ ಕೈಗೆ ಸಿಕ್ಕಾಗ ಅವನ ಬಳಿ ಐದು ಲಕ್ಷ ಸಿಕ್ಕಿತು ಅಂತ ಹೇಳಿಸಿದರ ಉದ್ದೇಶ... ಕ್ರಿಮಿನಲ್ ಕೇಸ್ ಆದ ಬ್ಲಾಕ್‌ಮೇಲ್ ಕೇಸ್ ಅನ್ನು ಒಂದು ಸಾಧಾರಣ ಕಳ್ಳತನದ ಕೇಸ್ ಆಗಿ ಪರಿವರ್ತಿಸಿದಿರಿ... ಕ್ರಿಮಿನಲ್ ಕೇಸ್ ಆಗಿದ್ದರೆ ಇಲಾಖೆ ಪ್ರಕರಣವನ್ನು ನಡೆಸುತ್ತದೆ. ಅಂದರೆ ಅದು ಸರ್ಕಾರ ಮತ್ತು ಆರೋಪಿಯ ವಿರುದ್ಧದ ಕೇಸ್ ಆಗುತ್ತಿತ್ತು. ಆದರೆ ತಾವು ಅದನ್ನು ಸಿವಿಲ್ ವ್ಯಾಜ್ಯ ಎಂದು ಬಿಂಬಿಸಿ ರಾಜಿಸಂಧಾನದ ಮೂಲಕ ಪ್ರಕರಣ ಮುಗಿಸಿದಿರಿ...

ಇಡೀ ಪ್ರಸಂಗದಲ್ಲಿ ನಿಜ ಎಂದರೆ ಆ ಸಿಡಿ ಮಾತ್ರ ಅಂತ ನಮಗೆ ಗೊತ್ತಾಗಿದೆ. ಅದನ್ನು ಆ ಡ್ರೈವರ್ ಎಲ್ಲಾ ಟೀವಿ ಚಾನೆಲ್‌ಗಳಿಗೆ ಹೇಗೆ ಕಳುಹಿಸಿದ? ಹತ್ತನೇ ಕ್ಲಾಸ್ ಸಹಿತ ಪಾಸ್ ಮಾಡದ ಅವನು ಆ ಸಿಡಿಯನ್ನು ಬ್ಲರ್ ಮಾಡಿದ್ದು ಹೇಗೆ? ಕೇಸ್ ಮುಗಿದ ನಂತರ ಡ್ರೈವರ್ ಊರು ಬಿಟ್ಟು ಹೋದ. ಅದೂ ಕೇವಲ ಒಂದು ತಿಂಗಳ ಹಿಂದಷ್ಟೇ ಬದಲಾಯಿಸಿದ್ದ ಮನೆಯಿಂದ... ಅವನೆಲ್ಲಿಗೆ ಹೋದ? ಅವನ ಹೆಂಡತಿ ಮಕ್ಕಳೆಲ್ಲಿ? ಅವರನ್ನು ಸ್ವಂತ ಊರಿಗೆ ಬಿಟ್ಟು ಬಂದು ಒಂದು ತಿಂಗಳ ಹಿಂದೆ ಈ ಆ ಮನೆಗೇ ಯಾಕೆ ಬಂದ... ಅಥವಾ ಅಲ್ಲೇನು ಮಾಡಲು ಬಂದ? ಇವೆಲ್ಲ ಉತ್ತರ ಸಿಗಬೇಕಾದ ಪ್ರಶ್ನೆಗಳೇ ಸಾರ್... ಅದಕ್ಕೇ ಹೊಸ ಲೀಡ್ ಸಿಕ್ಕಿದೆ ಎಂದು ಕಮಿಷನರ್ ಸಾಹೇಬರಿಗೆ ಹೇಳಿದೆ. ನನಗೆ ಗೊತ್ತಿತ್ತು ನೀವು ಕರೆಸುತ್ತೀರಿ ಅಂತ. ಅದರಂತೆ ನೀವು ಕರೆಸಿದ್ದೀರಿ..." ಅವನ ಧ್ವನಿಯಲ್ಲಿ ತನಗೆ ಸತ್ಯ ಗೊತ್ತಿದೆ ಎಂಬ ವಿಶ್ವಾಸ ಇತ್ತು.

ಎಲ್ಲವನ್ನೂ ಶಾಂತರೀತಿಯಿಂದಲೇ ಕೇಳಿಸಿಕೊಂಡ ಜಗದೀಶಚಂದ್ರ ಸ್ವಲ್ಪವೂ ವಿಚಲಿತರಾಗದೇ, "ನಿನ್ನ ಹರಿಕತೆ ಮುಗಿದಿದ್ದರೆ ನೀನಿನ್ನು ಹೊರಡಬಹುದು... ಹಾಂ ನಾಳೆ ಬೆಳಗ್ಗೆ ಟ್ರಾನ್ಸ್‌ಫರ್‌ಗೆ ರೆಡಿಯಾಗು..."

ಕಾರು ನಿಂತಿತು. ಹೋಗು ಎಂದರೂ ಹೊರಡಲು ಅನುವಾಗಲಿಲ್ಲ ಎಸಿಪಿ ಶಿವಣ್ಣ. ನಿಧಾನಕ್ಕೆ ಅಂದ: "ಸರ್ ಆ ಹೊಸ ಲೀಡ್... ಕಾನ್‌ಸ್ಟೆಬಲ್ ಮಂಜುಳ..."

ಜಗದೀಶಚಂದ್ರರ ಇಡೀ ದೇಹ ಒಮ್ಮೆ ಕಂಪಿಸಿತು. ಎಸಿ ಕಾರಿನಲ್ಲಿಯೂ ಮೈ ಬೆವರತೊಡಗಿತು. ಅವರಗೇ ಅರಿವಿಲ್ಲದಂತೆ ಡ್ರೈವರ್‌ಗೆ ಕಾರು ಚಲಾಯಿಸಲು ಹೇಳಿ, "ಯಾವ ಮಂಜುಳ, ಅವಳ್ಯಾರು ನನಗೆ ತಿಳಿಯದು. ಅವಳಿಗೂ ಇದಕ್ಕೂ ಏನು ಸಂಬಂಧ?"

"ಸರ್, ನಮಗೆ ಎಲ್ಲ ಈಗ ಕ್ಲಿಯರ್ ಆಗಿದೆ... ನಾನು ಮತ್ತೆ ಇನ್‌ಸ್ಪೆಕ್ಟರ್ ಗಂಗಾಧರ ಮತ್ತು ಪತ್ರಕರ್ತ ಸುನಿಲ್ ಮೂವರೂ ತನಿಖೆ ಮಾಡಿದ್ದೇವೆ. ಆ ಫಾರಂ ಹೌಸ್‌ನಲ್ಲಿ ನಡೆಯುವುದು ಶುದ್ಧ ದಂಧೆ. ಅದೂ ಪ್ರಮೋಷನ್ ಆಸೆಗೆ ಬರುವ ಹೆಣ್ಣು ಮಕ್ಕಳೊಂದಿಗೆ. ಇದಕ್ಕೆಲ್ಲಾ ನಿಮ್ಮ ಸಾಥಿ ನಮ್ಮದೇ ಇಲಾಖೆಯ ಮಂಜುಳಾ ಒಬ್ಬ ಮಹಿಳಾ ಎಎಸ್‌ಐಗೆ ಪ್ರಮೋಷನ್ ಕೊಡ್ತೀವಿ ಅಂತಾ ನಂಬಿಸಿ ಕೈಕೊಟ್ಟಾಗ ಅವಳು ಮಾಡಿದ್ದು ನಿಮ್ಮ ನಿಜವಾದ ಆ ಅಶ್ಲೀಲ ಸಿಡಿ. ಅವಳು ನಿಮ್ಮನ್ನು ಹೆದರಿಸಿದ್ದು ಮತ್ತೆ ಬ್ಲಾಕ್‌ಮೇಲ್ ಮಾಡಿದ್ದು... ಅದೆಲ್ಲಿಯಾದರೂ ಹೊರ ಬಂದರೆ ನಿಮ್ಮ ಜಾತಕ ಬಯಲಾಗುತ್ತೆ ಅಂತ ರಾತ್ರೋರಾತ್ರಿ ಈ ನಾಟಕ ಹುಟ್ಟು ಹಾಕಿ, ಆ ಡ್ರೈವರ್ ಅನ್ನು ಸಿಕ್ಕಿಸಿ ನಂತರ ಅವನ ಬಾಯಿಂದಲೇ ಅದ ನಕಲಿ ಸಿಡಿ ಎಂದು ಬಿಂಬಿಸಿಬಿಟ್ಟರಿ. ಈಗ ಆಕೆ ಆ ಸಿಡಿ ಹೊರತಂದರೂ ಜನ ಆಗಲೇ ಅದು ನಕಲಿ ಸಿಡಿ ಎಂದು ನಂಬಿ ಆಗಿದೆ. ಸೋ ಒಂದು